ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಬುಧವಾರ, ದಿನಾಂಕ: 17ನೇ ಜುಲೈ, 2019

ಗ್ರಾಮಠಾಣಾ ವ್ಯಾಪ್ತಿಯ ಆಸ್ತಿ ದಾಖಲಾತಿಯ ನಿರ್ವಹಣೆಯ ಬಗ್ಗೆ

ಶ್ರೀಕೆ.ವಿ.ನಾರಾಯಣಸ್ವಾಮಿ(ವಿಧಾನಸಭೆಯಿಂದಚುನಾಯಿತರಾದವರು):-

278 (322) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಖಾನೇಷುಮಾರಿ ಅಥವಾ ಗ್ರಾಮ ಠಾಣಾ ವ್ಯಾಪ್ತಿಯ ಆಸ್ತಿ ದಾಖಲಾತಿ ನಿರ್ವಹಣೆಯನ್ನು ಪ್ರಸ್ತುತ ಯಾವ ಇಲಾಖೆಗೆ ನೀಡಲಾಗಿದೆ ; ಈ ಹಿಂದೆ ಯಾವ ಇಲಾಖೆಯು ನಿರ್ವಹಿಸುತ್ತಿತ್ತು;

(ಆ) ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಸೋಮಶೆಟ್ಟಿಹಳ್ಳಿ ಗ್ರಾಮದ ಗ್ರಾಮಠಾಣಾ ವ್ಯಾಪ್ತಿಯ ಆಸ್ತಿ ದಾಖಲಾತಿಗಳನ್ನು ಕಂದಾಯ ಇಲಾಖೆಯಿಂದ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಹಸ್ತಾಂತರಿಸಲಾಗಿದೆಯೇ ;

(ಇ) ಹಾಗಿದ್ದಲ್ಲಿ, ಅವುಗಳ ಸಂಪೂರ್ಣ ವಿವರಗಳನ್ನು ನೀಡುವುದು; ಯಾವ ಅಧಿಕಾರಿ ಯಾರಿಗೆ ದಾಖಲಾತಿಗಳನ್ನು ಹಸ್ತಾಂತರಿಸಿದ್ದಾರೆ? (ಹೆಸರು ಮತ್ತು ಹುದ್ದೆಗಳ ವಿವರ ನೀಡುವುದು; ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು ಖಾನೇಷುಮಾರಿ ನಂ. 81, 81/1 ಮತ್ತು 81/2 ಆಸ್ತಿಯ ಮೂಲ ದಾಖಲಾತಿಯ ಪ್ರತಿ ನೀಡುವುದು)